ಅದಕ್ಕೆ ರೊಂಯ್ ಎಂದು ಮುತ್ತಿದ ಗುಂಗಾಡು. ಒಲೆ ಬಳಿ ಒಂದು ಅನ್ನದ ಪಾತ್ರೆ. ಅದಕ್ಕೆ ಅಂಟಿದ ಅನ್ನ ಈ ಸ್ಟೀಲ್ ಟ್ಯಾಂಕ್‌ನಲ್ಲಾದರು ನೀರಿದೆಯೇ ಎಂದು ಅದರ ನಲ್ಲಿ ತಿರುಗಿಸಿದ. ಸದ್ಯ, ನೀರು ಬಂದಿತು. ಅನ್ನದ ಪಾತ್ರೆಯನ್ನು ಕೆಳಗಿರಿಸಿದ.

ಚುರು ಚುರು ಎನ್ನುವ ಹೊಟ್ಟೆ. ಬೇಗ ಏನಾದರೂ ಸಿಕ್ಕರೆ ತಿನ್ನಬಹುದು ಎಂದು ಡಬ್ಬ ಅಲ್ಲಾಡಿಸಿ ಮುಚ್ಚಳ ತೆಗೆದು ಹಾಕ ತೊಡಗಿದ. ಮೊಟ್ಟ ಮೊದಲಿಗೆ ಹುಣಸೇ ಹಣ್ಣು ಸಿಕ್ಕಿತು.

ಬೆಲ್ಲ, ಉಪ್ಪು, ಮೆಣಸಿನಕಾಯಿ ಎಲ್ಲವನ್ನು ಶೋಧಿಸಿದ. ಕುಟ್ಟುಂಡೆಯ ಕಲ್ಪನೆಗೇ ಅವನ ಬಾಯಲ್ಲಿ ಜಲ ಜಲ ಎಂದು ನೀರುಕ್ಕತೊಡಗಿತು. ಬೇಗ ಬೇಗ ಏನಾದರು ಮಾಡಬೇಕು ಎಂದು ಕುಟ್ಟುಂಡೆಯನ್ನ ಚರ ಚರ ಚೀಪ ತೊಡಗಿದ.

ರಂಗಣ್ಣ ಬಂದರೇನು ಗತಿ? ಎಂಬುದೇ ಅವನ ಹಸಿವಿನ ತಾಳದ ಜತೆಗೆ ಎದೆ ಢಮರುಗ ಬಾರಿಸ ತೊಡಗಿ ಯಾವ ಉಪಾಯವೂ ಹೊಳೆಯದೆ ಕಣ್ಣಲ್ಲಿ ಕತ್ತಲಿಡತೊಡಗಿತು.

ಬಾಗಿಲು ಬಡಿದಾಗ ತೆರೆದ:

'ನೋಡ್ರೀ ಈ ಚೀಟಿ ರಂಗಣ್ಣ ಕೊಟ್ರು. ಅವರಿಗೆ ಮಂಡಗದ್ದೇಲಿ ಏನೋ ಜಮೀನು ಕೆಲಸ ಇದೆಯಂತೆ. ಶಾಮಣ್ಣನ ಮನೆಗೆ ಹೋಗು. ಅಲ್ಲಿ ಅವನ ಭಾವ ಮೈದುನನ ತಮ್ಮ ರಾಜೀವ ಬಂದಿರ್ತಾನೆ. ಅವ್ನು ಬಂದಿದ್ರೆ ಈ ಚೀಟಿ ಕೊಡು. ಇಲ್ದಿದ್ರ ನಾನು ಮುಂದಿನ ವಾರ ಬರುವವರೆಗೆ ರಾತ್ರಿ ಹೋಗಿ ನೀನು ಮಲಗು ಎಂದರು.' ಎಂದ ಹುಡುಗ ಚೀಟಿ ಕೊಟ್ಟ.

'ಏ ನಾನು ಆಗ್ಲೆ ಬಂದೆ. ನಾನು ಇರ್ತೀನಿ. ನೀನು ತೊಂದ್ರೆ ತಗೋ ಬೇಡ. ಅಲ್ದೆ ರಾತ್ರಿ ಒಬ್ನೆ ಈ ಮನೇಲಿ ಹೇಗೆ ಮಲಗ್ತೀ? ಅಲ್ಲಿ ನೋಡು ನೀನು ಬರೋದಿದ್ರೆ ತಗೋ ಈ ಬೀಗದ್ ಕೈ. ಆದ್ರೆ ಮನೆ ಕಡೆ ಜೋಪಾನ. ನಾಳೆ ಏನಾದ್ರು ಆದ್ರೆ ನಂಗೊತ್ತಿಲ್ಲ' ಎಂದ ಪ್ರಕಾಶ್. ಹುಡುಗ ಆಗಲೇ ಕೊಂಚ ರಾತ್ರಿಗೆ ಹೆದರಿದ್ದ. ಅಲ್ಲದೇ ದಿನಾ ಬಂದು ಮನೆ ಕಾಯೋದು ರಗಳೆ. 'ಆದ್ದರಿಂದ ಬೇಡ. ನೀವೇ ಇರಿ. ನನಗೆ ಬೆಳಗ್ಗೆನೆ ಕಾಲೇಜಿರುತ್ತೆ. ಪ್ರಾಕ್ಟಿಕಲ್ಸ್, ಈ ಸಲ ರ್‍ಯಾಂಕ್ ಬರದಿದ್ರೆ ಎಂಜಿನಿಯರಿಂಗ್ ಸೀಟು ಸಿಗಲ್ಲ. ನಾನು ಪಾರಾದೆ... ನೀವೇ ಇದ್ದು ಸರಿಯಾಗಿ ಮನೆ ನೋಡ್ಕೊಳಿ. ನಾನು ನನ್ನ ಫ್ರೆಂಡ್ ಜಯಂತ್ ಜೊತೆಗೆ ಕಂಬೈಂಡ್ ಸ್ಟಡಿ ಮಾಡ್ತೀವಿ' ಎಂದು ಸೈಕಲ್ ಏರಿದ.

ಚೀಟಿಯಲ್ಲೂ ಅದೇ. 'ನಾನು ಒಂದು ವಾರ ಮಂಡಗದ್ದೆಗೆ ಹೋಗ್ತಿದೀನಿ ಮನೆಕಡೆ ಜೋಪಾನ...' ಆ ಹಸಿವಿನಲ್ಲಿ ಪೀಡೆ ಕಳೀತು ಎಂದು ಸಮಾಧಾನದ ಶಿಳ್ಳೆ ಹಾಕಿದ.

ಅಡಿಗೆ ಮನೆಗೆ ನುಗ್ಗಿ ಧಾರಾಳವಾಗಿ ನೀರು ಕುಡಿದ. ಆರಾಂ ಕುರ್ಚಿ ಸೇರಿದ. ಮಂಪರು ಕವಿಯ ತೊಡಗಿತು.

ನಿದ್ದೆಬಂದು ಎಚ್ಚರಾದಾಗ ಸುತ್ತ ಬೆಳಕನ್ನ ನುಂಗಿದ ಮಸಿ ಮಸಿ ದಟ್ಟ ಕತ್ತಲು. ಎಷ್ಟು ಹೊತ್ತಾಗಿದೆ ಎನ್ನಿಸಿ ಚುರು ಚುರು ಎನ್ನುವ ಹೊಟ್ಟೆಯನ್ನ ಸಮಾಧಾನ ಪಡಿಸಬೇಕು ಎಂದುಕೊಂಡು ಲೈಟ್ ಹಾಕಲು ವರಾಂಡಕ್ಕೆ ಬಂದ. ಲೈಟ್ ಹಾಕಿದ. ಛಶ್ ಎಂದು ಬೆಳಕು ಸುತ್ತ ಹರಡಿತು. ಅಲ್ಲೊಂದು ಹೆಣ್ಣು ಇವಳಾರು? ಎಲ್ಲಿಂದ ಬಂದಳೋ? ಇವಳೇ ಈ ಮನೆ ಕಾಯಲು ಬಂದವಳೆ? ಪೊಲೀಸ್ ಸ್ಟೇಶನ್... ರಂಗಣ್ಣನ ಚೀಟಿ ಹೀಗೆ ನೂರಾರು ಚಿಂತೆಗಳು, ಸಮಾಧಾನಗಳು ಅವನ ಮೇಲೆ ದಾಳಿ ಮಾಡತೊಡಗಿದವು. ಅಲ್ಲಿ ನಾನು ಮುಂಬಾಗಿಲು ಹಾಕುವುದನ್ನು ಮರೆತೆನೇ? ಆ ಹುಡುಗ ಬಂದು ಹೋದ ಮೇಲೆ ಸೀದ ಒಳ ಹೋಗಿ ನಡುವಿನ ಬಾಗಿಲಿಕ್ಕಿ ಮಲಗಿರಬೇಕು. ವರಾಂಡದಲ್ಲಿ ಏನೂ ಇರಲಿಲ್ಲ.

ಆಕೆಯನ್ನ ಪ್ರಕಾಶ್ ನೋಡಿದ. ಆಕೆ ಮುಂಬಾಗಿಲಿಕ್ಕಿದಳು. ಅವಳಿಗಿಂತ ಇವನು ಮುಂದಾಗಿ ಎಲ್ಲ ಕಡೆ ದೀಪ ಬೆಳಗ ತೊಡಗಿದ. ಆಕೆ ಮಾತಾಡದೆ ಹಿಂಬಾಲಿಸಿದಳು.